ಅಧ್ಯಕ್ಷರು.—ತಾವುಗಳು ದಯವಿಟ್ಟು ಕುಳಿತುಕೊಳ್ಳಬೇಕು. ಪ್ರಶ್ನೋತ್ತರ ವೇಳೆ ಮುಗಿಲಿ. ಆ ಮೇಲೆ ತಾವುಗಳು ಮಾತನಾಡಬಹುದು. ನಾನು ತಮಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅಧ್ಯಕ್ಷರೇ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ತಮ್ಮಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ,

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ವಿರೋಧ ಪಕ್ಷದ ನಾಯಕಿಯವರು ತಮಗೆ ಒಂದು ಪತ್ರವನ್ನು ಬರೆದಿದ್ದಾರೆ. ಪಿಟಿಶನ್ ಕೊಟ್ಟಿದ್ದಾರೆ...ಅದಕ್ಕೆ ತಮ್ಮ ರೂಲಿಂಗ್ ಇನ್ನೂ ಕೊಟ್ಟಿಲ್ಲ. Which Government is functioning? Whether this Government is legal or not ? Whether they have been recognised ?

ಅಧ್ಯಕ್ಷರು.—ನಾನು ರೂಲಿಂಗ್‌ನ್ನು ಇವೊತ್ತು ಕೊಡುತ್ತಾ ಇದ್ದೇನೆ...ಆವೊತ್ತು ನಾನು ರೂಲಿಂಗ್‌ನ್ನು ಕಾಯ್ದಿರಿಸಿದ್ದೇನೆ ಎಂದು ಹೇಳಿದ್ದೇನೆ.. ಕಾಯ್ದಿರಿಸಿದ ರೂಲಿಂಗ್‌ನ್ನು ನಾನು ಇವೊತ್ತು ಕೊಡುತ್ತಾ ಇದ್ದೇನೆ ..

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತಮ್ಮನ್ನು ಕೇಳಿಕೊಳ್ಳುವುದೇನೆಂದರೆ...

ಅಧ್ಯಕ್ಷರು.—ಸನ್ಮಾನ್ಯ ನಾಗರತ್ನಮ್ಮನವರೇ, ತಾವುಗಳು ನನ್ನ ಸ್ಥಾನದಲ್ಲಿ ಆರು ವರ್ಷಗಳ ಕಾಲ ಕುಳಿತುಕೊಂಡು ಚೆನ್ನಾಗಿ ಕಾರ್ಯಕಲಾಪಗಳನ್ನು ಮಾಡಿದ್ದೀರಿ. ಹಾಗೆ ನೀವು ಹಾಕಿ ಕೊಟ್ಟಿರ ತಕ್ಕಂಥ ಒಳ್ಳೆಯ ಸಂಪ್ರದಾಯಗಳನ್ನು ಈಗ ನೀವೇ ಮುರಿಯುವುದು ಬೇಡ. ಆ ಸತ್‌ಸಂಪ್ರದಾಯವನ್ನು ನಾವೆಲ್ಲರೂ ಮುಂದುವರಿಸಿಕೊಂಡು ಹೋಗೋಣ. ತಾವುಗಳು ಈಗ ದಯವಿಟ್ಟು ಕುಳಿತುಕೊಳ್ಳಬೇಕು. ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ತಮಗೆ ಅವಕಾಶ ಕೊಡುತ್ತೇನೆ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಆಯಿತು...

ಅಧ್ಯಕ್ಷರು.—Thank you very much

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ಇದ್ದಿದ್ದರೆ ಆ ಪ್ರಶ್ನೆ ಬರುತ್ತಿರಲಿಲ್ಲ...

SRI A. LAKSHMISAGAR.—If there is no Covernment, why are they here. I would like to ask them. If there is no Government. they have no business to come here.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಮ್ಮನ್ನು ಜನರು ಆರಿಸಿ ಇಲ್ಲಿಗೆ ಕಳುಹಿಸಿದ್ದಾರೆ ಎಂದು ನಾವು ಇಲ್ಲಿಗೆ ಬಂದಿದ್ದೇವೆ...

ಶ್ರೀ ಎ. ಲಕ್ಷ್ಮೀಸಾಗರ್.—ಜನರೇ ನಿಮ್ಮನ್ನು ಪ್ರಶ್ನೆ ಮಾಡುತ್ತಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೀವು ಕಿರೀಟ ಹಾಕುತ್ತೀರಿ ಎಂದು ನಾವು ಇಲ್ಲಿಗೆ ಬಂದಿಲ್ಲ. ನಮ್ಮನ್ನು ಆರಿಸಿ ಇಲ್ಲಿಗೆ ಕಳುಹಿಸಿದವರು ಜನರು...

ಅಧ್ಯಕ್ಷರು.—ಮಾನ್ಯ ಶ್ರೀ ಬಿ. ಎಂ. ಇದಿನಬ್ಬನವರೇ ತಾವು ತಮ್ಮ ಪ್ರಶ್ನೆಯನ್ನು ಈಗ ಕೇಳಿ.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿ ಮಾತಿನ ಉತ್ತರಗಳು

ದಕ್ಷಿಣ ಕನ್ನಡ ಜಿಲ್ಲೆಯ ಅರಣ್ಯ ಜಮೀನಿನಲ್ಲಿ ಅಕ್ರಮ ಸಾಗುವಳಿ ಮಾಡುತ್ತಿರುವ ಬಗ್ಗೆ

೫೭೦. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ವ್ಯವಸಾಯ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಅರಣ್ಯ ಜಮೀನಿನಲ್ಲಿ ಎಷ್ಟು ಜನರು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೆ ಹಾಗೂ ಎಷ್ಟು ವರ್ಷಗಳಿಂದ?

ಆ) ಅರಣ್ಯ ಜಮೀನಿನಲ್ಲಿ ಬಹುಕಾಲದಿಂದ ವಾಸ್ತವ್ಯ ಮಾಡುವವರನ್ನು ಬಲಾತ್ಕಾರವಾಗಿ ಒಕ್ಕಲೆಬ್ಬಿಸುತ್ತಿದ್ದಾರೆ.

ಇ) ಬಹುಕಾಲದಿಂದ ವಾಸ್ತವ್ಯ ಮಾಡುವವರಿಗೆ ಯಾವಾಗ ಹಕ್ಕುಪತ್ರ ಕೊಡಲಾಗುವುದು? ಅದಕ್ಕೆ ಬೇಕಾದ ಏರ್ಪಾಡನ್ನೇನಾದರೂ ಮಾಡಲಾಗಿದೆಯೇ?